# ಸರ್ವಾಪರಾಧವ ಕ್ಷಮಿಸಯ್ಯ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 551.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 381.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics mentioned here are as per Ref. 2. The wordings in Ref. 1 are similar to Ref. 2. Singer has followed these lyrics.

ರಾಗ: ಶಂಕರಾಭರಣ ತಾಳ: ತ್ರಿವಿಡೆ

ಸರ್ವಾಪರಾಧವ ಕ್ಷಮಿಸಯ್ಯ, ಎನ್ನ
ಗರ್ವಾಂಧಕಾರವ ಬಿಡಿಸಿ ರಕ್ಷಿಸಯ್ಯ || ಪ ||

ಎಂದೆಂದು ಹಿರಿಯರ ನಿಂದಿಸಿದೆನೊ ಚೆಲ್ವ
ಚಂದನಗಂಧಿಯರೊಳು ಸರಸವಾಡಿದೆನೊ
ಬಂಧು ಬಂದರೆ ಎನ್ನ ಬಿಗುಹು ಬಿಂಕವ ತೋರೆ
ಬಂದೋಡಿದ್ವರ್ರೈ ಎನ್ನ ಬೇಕೆಂದು ಕೋರದೆ
ಕುಂದ-ಕುಟ್ಮಲ-ದಂತ ಚಂದಿರ ವದನ ಗೋ-
ವಿಂದನ ಪಾದಾರವಿಂದವ ಸ್ಮರಿಸೆನು
ಒಂದು ದಿನವು ನಾನು ಮಿಂದು ಮಡಿಯನುಟ್ಟು
ಗಂಧ ಪುಷ್ಪಾರ್ಚನೆಗಳನು ಮಾಡೆನು ಎನ್ನ || 1 ||

ಅನ್ನ ದಾನವ ಮಾಡಲರಿಯೆನು ನಾ ಮುನ್ನ
ಸ್ವರ್ಣ ದಾನದ ಮಾತು ಸೊಗಸದು ಕಿವಿಗೆ
ಕನ್ಯಾ ದಾನದ ಮಾತು ಕನಸಿನಲಿ ನಾ ಕಾಣೆ
ಮುನ್ನವರಿಯದ ಮಹಾ ಮುಗ್ಧ ಕಾಣಯ್ಯ

ಉನ್ನತ ಗೋದಾನ ಭೂದಾನ ಮೊದಲಾದ್ದು
ಸನ್ಮತಿಯಲಿ ಕೊಟ್ಟು ಸುಖಿಸುವುದರಿಯೆನು
ಅನ್ಯಾಯವ ಮಾಡಿ ಹರಿ ನಿನ್ನ ಮರೆಹೊಕ್ಕೆ
ಬೆಣ್ಣೆ ಕಳ್ಳನೆ ಮುದ್ದು ಚಿಣ್ಣ ಕೃಷ್ಣಯ್ಯ || 2 ||

ಪಾಪಿಯರೊಳು ಅತಿ ಪಾಪಿ ಎಂತೆಂಬರು
ಕೋಪಿಗಳೊಳು ಉಗ್ರ ಕೋಪಿ ನಾನು
ಕೋಪ ತಾಪದ ವ್ಯಾಧಿಯನೆಲ್ಲ ಗುಣಮಾಡಿ
ಶ್ರೀಪತಿಯೆ ನೀ ಸಲಹೋ ಕರುಣದಿ
ಈ ಪರಿಯಲಿ ಮೇಲುಕೋಟೆ ಇಂದಿರೆವರ
ಆಪದ್ಬಂಧುವೆ ಭಕ್ತರಘಹರನೆ
ತಾಪತ್ರಯಗಳ ಬಿಡಿಸಿ ಚೆಲ್ವರಾಯ
ಗೋಪಾಲ ಮೂರುತಿ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

**ಗರ್ವಾಂಧಕಾರ** – ಹೆಮ್ಮೆಯೆಂಬ ಕತ್ತಲೆ; ಅಹಂಕಾರ – ಮಮಕಾರಗಳು.

**ಚಂದನಗಂಧಿಯರೊಳು** – ಪರಿಮಳ ದ್ರವ್ಯಗಳನ್ನು ಪೂಸಿಕೊಂಡ ಹೆಂಗಳೆಯರೊಡನೆ.

**ಬಿಗುಹು** – ಬಿಗಿ, ಗತ್ತು.

**ಕುಂದ ಕುಟ್ಮಲ ದಂತ** – ಮಲ್ಲಿಗೆಯ ಮೊಗ್ಗುಗಳಂತೆ ತೋರುವ ಹಲ್ಲುಗಳು.

**ಮುನ್ನವರಿಯದ** – ಮುಂದೇನು ಎಂಬುದನ್ನು ಕಾಣದ.

**ಭಕ್ತರಘಹರನೆ** – ಮೊರೆಹೊಕ್ಕವರ ಪಾಪಗಳನ್ನು ತೊಲಗಿಸುವವನೆ.

**ತಾಪತ್ರಯಗಳ** – ಆಧ್ಯಾತ್ಮಿಕ, ಆಧಿಭೌತಿಕ, ಅಧಿದೈವಿಕಗಳೆಂಬ ಮೂರು ವಿಧವಾದ ತೊಂದರೆಗಳು.
ಆಧ್ಯಾತ್ಮಿಕವೆಂದರೆ ದೇಹಕ್ಕೆ ಮತ್ತು ಮನಸ್ಸಿಗೆ ಬರುವ ಅಧಿ ವ್ಯಾಧಿಗಳು; ಆದಿಭೌತಿಕವೆಂದರೆ ನೆರೆಹೊರೆಯ ಜನರಿಂದ, ಕಳ್ಳಕಾಕರಿಂದ, ಹುಲಿಸಿಂಗ ಮೊದಲಾದ ವನ್ಯ ಪ್ರಾಣಿಗಳಿಂದ, ಹಾವು ಚೇಳು ಮೊದಲಾದ

ವಿಷ ಜಂತುಗಳಿಂದ ಒದಗುವ ಕಷ್ಟ; ಆದಿದೈವಿಕವೆಂದರೆ ಅತಿಯಾದ ಬಿಸಿಲು, ಮಳೆ, ಗಾಳಿ, ಸಿಡಿಲು, ಭೂತ ಭಾದೆ ಮೊದಲಾದ ಉಪದ್ರವಗಳು.

**Classification:** Keerthane
**Ankita:** purandara vittala
**Location:** Melkote, Karnataka
**Category:** Binnaha, Vishnu Stuti
**Sub-Category:** Vishnu, Melkote, kshme, garva, bayyi, gandha, bandhu, Chandra, govinda, smarane, dina, madi, hoovu, pushpa, archane, anna, dAna, bangara, kivi, kanasu, govu, bhumi, sukha, benne, kalla, Krishna, papa, sittu, sripati, karuna, Gopala,
**Pravachana:** NA
**Explanation:** NA